ಆ. ಹಾಗಿದ್ದಲ್ಲಿ, ಉಳಿದ ರೂ 90.00 ಲಕ್ಷ ಅನುದಾನವನ್ನು ಸರ್ಕಾರ ಯಾವಾಗ ಬಿಡುಗಡೆ ಮಾಡಲಾಗುವುದು;

ಇ. ಹಾಗಿದ್ದಲ್ಲಿ ಉಳಿದಿರುವ ರೂ.90.00 ಲಕ್ಷಗಳ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಿ ಕ್ರೀಡಾಂಗಣ ನಿರ್ಮಾಣಕ್ಕೆ ಅನುಕೂಲ ಮಾಡಿಕೊಡಲಾಗುವುದೇ?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು)

ಅ.ಆ.ಇ. ಹೌದು.

ಗೌರಿಬಿದನೂರು ತಾಲ್ಲೂಕಿನ ಪ್ರತಿಭಾವಂತ ಕ್ರೀಡಾಪಟುಗಳಿಗೆ ಅನುಕೂಲ ಕಲ್ಪಿಸಲು ಸರ್ಕಾರಿ ಆದೇಶ ವಾಪ್ರಯು 71 ಯುಸೇಕ್ರೀ 2001 ದಿ 23.10.2001 ರಲ್ಲಿ ರೂ. 80.00 ಲಕ್ಷ ಅಂದಾಜು ವೆಚ್ಚದಲ್ಲಿ ಮಾತ್ರ ಕ್ರೀಡಾಂಗಣ ನಿರ್ಮಿಸಲು ಸರ್ಕಾರಿ ಆಡಳಿತಾತ್ಮಕ ಅನುಮೋದನೆ ನೀಡಿದೆ. ಕೋಲಾರ ಜಿಲ್ಲಾ ಪಂಚಾಯತ್‌ನಿಂದ ಈ ಉದ್ದೇಶಕ್ಕಾಗಿ ಈಗಾಗಲೇ ರೂ.8.00 ಲಕ್ಷಗಳನ್ನು ನಿರ್ಮಾಣ ಏಜನ್ಸಿಯಾದ ಜಿಲ್ಲಾ ಪಂಚಾಯತ್ ಇಂಜನೀಯರಿಂಗ್ ವಿಭಾಗಕ್ಕೆ ಬಿಡುಗಡೆಗೊಳಿಸಲಾಗಿದೆ. ಉಳಿದ ಅನುದಾನವನ್ನು 12ನೇ ಹಣಕಾಸು ಧನ ಸಹಾಯದಲ್ಲಿ ಒದಗಿಸಲು 2006–07ನೇ ಸಾಲಿನಲ್ಲಿ ಮೀಸಲಿಟ್ಟಿರುವುದರಿಂದ ಆದಷ್ಟು ಶೀಘ್ರವಾಗಿ ಹಣ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

266 (307) ಶ್ರೀ ಸಿದ್ದು ಸಾವದಿ (ಜಮಖಂಡಿ) ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ದಿನಾಂಕ 1.1.2004 ರಿಂದ ಇದು ವರೆವಿಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು (ಹಂಚಿಕೆದಾರರ ಸಂಪೂರ್ಣ ವಿವರಗಳನ್ನು ಒದಗಿಸುವುದು);

ಆ. ಶಾಸಕರಿಗೆ ಸೈಟುಗಳನ್ನು ಒದಗಿಸಲು ಇರುವ ನಿಯಮಾವಳಿಗಳೇನು;

ಇ. ಹನ್ನೆರಡನೇ ವಿಧಾನ ಸಭೆಗೆ ಆಯ್ಕೆಯಾದವರಲ್ಲಿ ಎಷ್ಟು ಜನರಿಗೆ ಈಗಾಗಲೇ ಸೈಟ್ ಕೊಡಲಾಗಿದೆ. ಹಾಗೂ ಉಳಿದವರಿಗೆ ಕೊಡದೇ ಇರುವ ಕಾರಣಗಳೇನು; ಹಾಗಿದ್ದಲ್ಲಿ, ಯಾವಾಗ ಹಂಚಿಕೆ ಮಾಡಲಾಗುವುದು;

ಈ. ಹನ್ನೆರಡನೇ ವಿಧಾನ ಮಂಡಲದ ಶಾಸಕರ ಸಂಬಂಧಿಗಳಿಗೆ ಎಷ್ಟು ಸೈಟುಗಳನ್ನು ವಿತರಿಸಲಾಗಿದೆ. ಹಾಗೂ ಯಾವ ನಿಯಮಾನುಸಾರ ವಿತರಿಸಲಾಗಿದೆ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)

ಅ. 11,886.

(ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಪ್ರತಿ ಒದಗಿಸಲಾಗುವುದು).

ಆ. ಶಾಸಕರಿಗೆ ನಿವೇಶನ ಹಂಚಿಕೆಗೆ ಪ್ರತ್ಯೇಕವಾಗಿ ನಿಯಮಾಳಿಗಳನ್ನು ರೂಪಿಸಿರುವುದಿಲ್ಲ.

ಇ. 26 ಶಾಸಕರಿಗೆ ಸರ್ಕಾರದ ವಿವೇಚನೆ ಗೊಳಪಟ್ಟು "ಜಿ" ಪ್ರವರ್ಗದಲ್ಲಿ ಬಿಡಿ ನಿವೇಶನವನ್ನು ಹಂಚಿಕೆ ಮಾಡಲಾಗಿದೆ. "ಜಿ" ಪ್ರವರ್ಗದಡಿ ಹಂಚಿಕೆಗಾಗಿ ಬಿಡಿ ನಿವೇಶನಗಳ ಕೊರತೆ ಇದೆ.

ಈ. ವಿತರಿಸಲಾಗಿಲ್ಲ.

267 (418) ಶ್ರೀ ಸಿಂಧೂರ ಜಿ.ರಾಜಶೇಖರ (ಶಿಗ್ಗಾಂವ್)

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಕರ್ನಾಟಕ ರಾಜ್ಯ ಹೆದ್ದಾರಿಗಳು ಗ್ರಾಮ, ನಗರ ಮತ್ತು ಪಟ್ಟಣ ಪ್ರದೇಶಗಳ ರಸ್ತೆ ಗಡಿರೇಖೆ, ಕಟ್ಟಡರೇಖೆ ಹಾಗೂ ನಿಯಂತ್ರಣ ರೇಖೆಗಳನ್ನು ನಿಗದಿಪಡಿಸುವ ಕುರಿತು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸುವುದು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಹಿದ್ದಲ್ಲಿ ಅದಕ್ಕೆ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;

ಇ. ಸಾರ್ವಜನಿಕರಿಗೆ ಹಾಗೂ ಸಾರಿಗೆಗೆ ಅನಾನುಕೂಲತೆಯಾಗುತ್ತಿರುವುದರಿಂದ ತೀವ್ರಗತಿಯಲ್ಲಿ ರಸ್ತೆ, ಕಟ್ಟಡ ನಿಯಂತ್ರಣ ರೇಖೆಯನ್ನು ನಿಗದಿಪಡಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ;

ಈ. ರೇಖೆಗಳನ್ನು ನಿಗದಿಪಡಿಸುವಾಗ ಸಾರ್ವಜನಿಕರಿಂದ ಆಕ್ಷೇಪಣೆ ಬಂದಲ್ಲಿ ಸುಗ್ರೀವಾಜ್ಞೆ ಹೊರಡಿಸಲು ಸರಕಾರ ಯೋಚಿಸಿದೆಯೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)

ಅ. ಪ್ರಸ್ತುತ ರಾಜ್ಯದಲ್ಲಿ 17252 ಕಿಮೀ ಉದ್ದದ ರಾಜ್ಯ ಹೆದ್ದಾರಿಗಳಿವೆ. ಈ ಪೈಕಿ 7423 ಕಿಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆ ಹಾಗೂ ಕೆಲವು ಗ್ರಾಮೀಣ ರಸ್ತೆಗಳನ್ನು ಕೂಡಿಸಿ 18.5.2004 ರಲ್ಲಿ ರಾಜ್ಯ ಹೆದಾರಿಗಳಾಗಿ ಮೇಲ್ದರ್ಜೆಗೇರಿಸಲಾಗಿದೆ. ರಾಜ್ಯದಲ್ಲಿ 2004ನೇ ಇಸವಿಗೆ ಮುನ್ನ ಇದ್ದ 9829